## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ.12/2015

ಚಾಸಾ-12 ಫ್ರಾಸಾ-12

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 05-06-2026

| | | |
|---|---|---|
| ಹೆಸರು | : | ರಾಜಕುಮಾರ @ ಯುವರಾಜ |
| ತಂದೆಯ ಹೆಸರು | : | ವಿಠಲ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಪೆಟ್ರೋಲ ಪಂಪನಲ್ಲಿ ಕೆಲಸ |
| ವಾಸಸ್ಥಳ | : | ಮಾಡಬಾಳ ತಾಂಡಾ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 13 ಪರಿಚಯ.

ನಾನು 2010 ರಿಂದ 2018 ರವರೆಗೆ ಮಹಾಂತೇಶ್ವರ ಪೆಟ್ರೋಲ ಏಜೆನ್ಸಿ ಅಫಜಲಪುರದಲ್ಲಿ ಕೆಲಸ ಮಾಡಿರುತ್ತೇನೆ.

ಆರೋಪಿತರು ನಮ್ಮ ಪೆಟ್ರೋಲ ಪಂಪಗೆ ಬಂದು ಡಬ್ಬಿಯಲ್ಲಿ ಡೀಸೆಲ ತೆಗೆದುಕೊಂಡು ಹೋಗಿದ್ದರು. ಏಕೆ ಅಂತ ಕೇಳಿದಾಗ ನಮ್ಮ ವಾಹನಗಳಿಗೆ ಬೇಕಾಗಿದೆ ಅಂತ ಹೇಳಿ ಹಳೆಯ ರಶೀದಿಗಳು ನೀಡಿ ಡೀಸೆಲ ಒಯ್ಯುತ್ತಿದ್ದರು. ನನಗೆ ಯಾಮಾರಿಸಿ ಡೀಸೇಲ ಒಯ್ದಿರುತ್ತಾರೆ. ನನಗೆ ಇಷ್ಟೆ ಗೊತ್ತು. ಈ ಕುರಿತು ಪೋಲಿಸರು ನನಗೆ ವಿಚಾರಿಸಿದಾಗ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ಮಹಾಂತೇಶ್ವರ ಏಜೆನ್ಸಿ ರವರೊಂದಿಗೆ ರೇಣುಕಾ ಶುಗರ್ಸ ರವರು ಡೀಸೆಲ್ ಕುರಿತು ಒಪ್ಪಂದ ಮಾಡಿಕೊಂಡಿದ್ದರು ಎಂದರೆ ಸರಿ. ಆರೋಪಿತರು ತುರ್ತಾಗಿ ಡೀಸಲ ಬೇಕಾಗಿದೆ ಎಂದು ನಮ್ಮ ಪೆಟ್ರೋಲ ಏಜೆನ್ಸಿಗೆ ಬಂದು ಕಂಪನಿ ಇಂಡೆಂಟ ಸ್ಲಿಪಗಳು ನೀಡಿ ಡೀಸೆಲ ಒಯ್ಯುತ್ತಿದ್ದರು ಎಂದರೆ ಸರಿ. ಆರೋಪಿತರು ಒಟ್ಟು 20 ಇಂಡೆಂಟ ಸ್ಲಿಪಗಳು ಕಳುವುಮಾಡಿ 1705 ಲೀಟರ ಡೀಸೆಲನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡು ಕಂಪನಿಗೆ ಮೋಸ ಮಾಡಿರುವ ಕುರಿತು ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಇಂಡೆಂಟ ಕಳುವುಮಾಡಲು ಕಂಪೂಟರ ಆಪರೇಟರ ಸಹಾಯ ಮಾಡಿರುತ್ತಾನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ **MSD, DBP** ವಕೀಲರಿಂದ **:-**</u>

ನಾನು ಮಹಾಂತೇಶ್ವರ ಏಜೆನ್ಸಿ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಯಾವುದೇ ದಾಖಲಾತಿಗಳನ್ನು ಪೋಲಿಸರಿಗೆ ನೀಡಿಲ್ಲ. ಮಹಾಂತೇಶ್ವರ ಏಜೆನ್ಸಿಗೆ ಪಡೆಯಲು ಯಾರು ಯಾರು ಯಾವ ದಿನಾಂಕದಂದು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಳೆ ರಶೀದಿ ಎಂದರೆ ಯಾವ ರಶೀದಿ ಎಂದು ನನಗೆ ಗೊತ್ತಿಲ್ಲ. ಪೋಲಿಸರ ಕೋರಿಕೆ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ